# ಪ.ಜಾತಿಗಳ ಮತ್ತು ಪ.ಪಂಗಡಗಳ ಸಂಸದೀಯ ಕಲ್ಯಾಣ ಸಮಿತಿ

**ಸಮಿತಿಯ ರಚನೆ**

ಪ.ಜಾತಿ ಮತ್ತು ಪ.ಪಂಗಡಗಳ ಕಲ್ಯಾಣ ಸಮಿತಿಯಲ್ಲಿ 20 ಲೋಕಸಭಾ ಸದಸ್ಯರು ಮತ್ತು 10 ರಾಜ್ಯಸಭಾ ಸದಸ್ಯರು ಇರುತ್ತಾರೆ. ಇವರನ್ನು ಆಯಾ ಸದನಗಳೇ ಆಯ್ಕೆ ಮಾಡುತ್ತವೆ. ಇವರಲ್ಲಿ ಒಬ್ಬರನ್ನು ಸಮಿತಿ ಅಧ್ಯಕ್ಷರನ್ನಾಗಿ ಲೋಕಸಭಾ ಅಧ್ಯಕ್ಷರು ಆಯ್ಕೆ ಮಾಡುತ್ತಾರೆ. ಮಂತ್ರಿ ಹುದ್ದೆಯಲ್ಲಿ ಇರುವವರು ಈ ಸಮಿತಿಗೆ ಸದಸ್ಯರಾಗುವಂತಿಲ್ಲ. ಈ ಸಮಿತಿಯಲ್ಲಿ ಸದಸ್ಯರಾಗಿರುವವರು ಮಂತ್ರಿ ಮಂಡಲಕ್ಕೆ ಆಯ್ಕೆ ಮಾಡಿಕೊಳ್ಳಲ್ಪಟ್ಟಲ್ಲಿ, ಅಂಥವರು ಮಂತ್ರಿ ಹುದ್ದೆಯ ಪ್ರಮಾಣ ವಚನ ಸ್ವೀಕರಿಸಿದ ಕೂಡಲೇ, ಈ ಸಮಿತಿಯ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ. ಈ ಸಮಿತಿಯ ಅವಧಿ ಒಂದು ವರ್ಷ.

**ಸಮಿತಿಯ ಕಾರ್ಯಗಳು**

- ಸಂವಿಧಾನದ ಅನುಚ್ಛೇದ 338(5)(ಡಿ) ಮತ್ತು 338ಎ(5)(ಡಿ) ಪ್ರಕಾರ ರಚನೆಯಾಗಿರುವ ಪ.ಜಾತಿಗಳ ಮತ್ತು ಪ.ಪಂಗಡಗಳ ಆಯುಕ್ತರು (ಇದನ್ನು, ಸಂವಿಧಾನಕ್ಕೆ ತರಲಾದ 65ನೇ ತಿದ್ದುಪಡಿಯು 12 ಮಾರ್ಚ್ 1992ರಿಂದ ಜಾರಿಗೆ ಬಂದ ಮೇರೆಗೆ, 'ಪ.ಜಾತಿಗಳ ಮತ್ತು ಪ.ಪಂಗಡಗಳ ರಾಷ್ಟ್ರೀಯ ಆಯೋಗ' ಎಂದು ಪುನರ್‌ನಾಮಕರಣ ಮಾಡಲಾಗಿದೆ. ಸಂವಿಧಾನಕ್ಕೆ ಮತ್ತೆ ತರಲಾದ 89ನೇ ತಿದ್ದುಪಡಿ ಜಾರಿಗೆ ಬಂದ ಮೇರೆಗೆ, ಈ ಆಯೋಗವನ್ನು 'ಪ.ಜಾತಿಗಳ ರಾಷ್ಟ್ರೀಯ ಆಯೋಗ' ಮತ್ತು 'ಪ.ಪಂಗಡಗಳ ರಾಷ್ಟ್ರೀಯ ಆಯೋಗ' ಎಂದು ಪ್ರತ್ಯೇಕಿಸಲಾಗಿದೆ). ಸಲ್ಲಿಸುವ ವರದಿಗಳನ್ನು ಪರಿಶೀಲನೆ ಮಾಡುವುದು; ವರದಿಯಲ್ಲಿನ ಅಂಶಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸುವುದು.
- ತಾನು ಸೂಚಿಸಿದ ಕ್ರಮಗಳು ಜಾರಿಗೊಂಡಿರುವ ಬಗ್ಗೆ ಸಂಸತ್ತಿಗೆ ವರದಿ ಸಲ್ಲಿಸುವುದು.
- ಕೇಂದ್ರ ಸರ್ಕಾರವು ಸಂವಿಧಾನದ ಅನುಚ್ಛೇದ 335ರ ಆಶಯದಂತೆ ಸಾರ್ವಜನಿಕ ಉದ್ದಿಮೆಗಳು, ರಾಷ್ಟ್ರೀಕೃತ ಬ್ಯಾಂಕ್‌ಗಳು, ಉದ್ಯಮಗಳು, ಕೈಗಾರಿಕೆಗಳು, ಕಂಪನಿಗಳು, ಅರೆಸರ್ಕಾರಿ ಸಂಸ್ಥೆಗಳು ಸೇರಿದಂತೆ ತನ್ನ ಅಧೀನದಲ್ಲಿ ಇರುವ ಎಲ್ಲಾ ಇಲಾಖೆಗಳಲ್ಲಿ ಪ.ಜಾತಿ ಮತ್ತು ಪ.ಪಂಗಡಗಳವರಿಗೆ ನಿಯಮಾನುಸಾರ ಪ್ರಾತಿನಿಧ್ಯ ದೊರಕಿರುವುದನ್ನು ಪರಿಶೀಲನೆ ನಡೆಸುವುದು ಮತ್ತು ಈ ವಿಷಯದಲ್ಲಿ ಅಗತ್ಯ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ನೀಡುವುದು.
- ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮಲ್ಲಿನ ಪ.ಜಾತಿ ಮತ್ತು ಪ.ಪಂಗಡಗಳವರ ಅಭಿವೃದ್ಧಿಗಾಗಿ ಹಮ್ಮಿಕೊಳ್ಳುವ ಯೋಜನೆ ಕಾರ್ಯಕ್ರಮಗಳನ್ನು ಪರಿಶೀಲಿಸುವುದು ಮತ್ತು ಆ ಕುರಿತು ಸಂಸತ್ತಿಗೆ ವರದಿ ಸಲ್ಲಿಸುವುದು.
- ತನಗೆ ವಹಿಸಲಾಗಿರುವ ಜವಾಬ್ದಾರಿ ನಿರ್ವಹಿಸಲು ಅಗತ್ಯವೆಂದು ಕಾಣುವ ವಿಷಯಗಳ ಬಗ್ಗೆ ಅಧ್ಯಯನ ಮಾಡುವುದು, ಪರಿಶೀಲನೆ ಮಾಡುವುದು ಮತ್ತು ಈ ಕುರಿತು ಸಂಸತ್ತಿಗೆ ವರದಿ ಸಲ್ಲಿಸುವುದು ಹಾಗೂ ಸಂಸತ್ತು ಅಥವಾ ಲೋಕಸಭಾ ಅಧ್ಯಕ್ಷರು ವಹಿಸಿಕೊಡುವ ಯಾವುದೇ ಕೆಲಸಗಳನ್ನು ನಿರ್ವಹಿಸುವುದು.
- ಇತರ ಸಂಸದೀಯ ಸಮಿತಿಗಳಿಗೆ ಇರುವ ಹಾಗೆ ಈ ಸಮಿತಿಗೂ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರಗಳ ಮತ್ತು ಕೇಂದ್ರಾಡಳಿತಕ್ಕೆ ಒಳಪಟ್ಟ ಸಾರ್ವಜನಿಕ ಉದ್ದಿಮೆಗಳು, ರಾಷ್ಟ್ರೀಕೃತ ಬ್ಯಾಂಕ್‌ಗಳು, ಕೈಗಾರಿಕೆಗಳು, ಕಂಪನಿಗಳು ಅರೆಸರ್ಕಾರಿ ಸಂಸ್ಥೆಗಳು ಪ.ಜಾತಿ ಮತ್ತು ಪ.ಪಂಗಡಗಳವರಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸುವ ಅಧಿಕಾರ ಇದೆ;

ಅಲ್ಲದೆ, ಅಧಿಕಾರಿಗಳನ್ನು ಮತ್ತು ಅಧಿಕಾರೇತರ ಸದಸ್ಯರನ್ನು ಸಮನ್ಸ್ ಮೂಲಕ ಕರೆಯಿಸಿಕೊಂಡು ಸಾಕ್ಷ್ಯ ನುಡಿಯುವಂತೆ ಆದೇಶಿಸುವ ಅಧಿಕಾರ ಇದೆ. ಸಮಿತಿಯು ಪರಿಶೀಲನೆಗೆ ಮತ್ತು ವಿಚಾರಣೆಗೆ ಸ್ವೀಕರಿಸಿದ ಪ್ರಕರಣಗಳಿಗೆ ಸಂಬಂಧಿಸಿ ಪ.ಜಾತಿಗಳ ರಾಷ್ಟ್ರೀಯ ಆಯೋಗ ಮತ್ತು ಪ.ಪಂಗಡಗಳ ರಾಷ್ಟ್ರೀಯ ಆಯೋಗಗಳ ಬಳಿ ಇರುವ ದಾಖಲೆಗಳನ್ನು ಪಡೆದುಕೊಳ್ಳುತ್ತದೆ ಮತ್ತು ಈ ಆಯೋಗಗಳ ಸಹಕಾರವನ್ನು ಪಡೆದುಕೊಳ್ಳುತ್ತದೆ.

**ಸಮಿತಿಯು ಕಾರ್ಯನಿರ್ವಹಿಸುವ ವಿಧಾನ**

ಪ.ಜಾತಿ ಮತ್ತು ಪ.ಪಂಗಡಗಳಿಗೆ ಸಂಬಂಧಿಸಿದ್ದು, ಪರಿಶೀಲನೆಗೆ ಮತ್ತು ವಿಚಾರಣೆಗೆ ಅರ್ಹವೆಂದು ಸಮಿತಿಯು ಅಭಿಪ್ರಾಯಪಡುವ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಪ.ಜಾತಿ ಮತ್ತು ಪ.ಪಂಗಡಗಳಿಗೆ ಸಂಬಂಧಿಸಿ ಕಾಲ ಕಾಲಕ್ಕೆ ಉದ್ಭವಿಸುವ ಮತ್ತು ಬೆಳಕಿಗೆ ಬರುವ ಹಾಗೂ ಲೋಕಸಭೆ ಅಥವಾ ಲೋಕಸಭಾ ಅಧ್ಯಕ್ಷರು ಸೂಚಿಸುವ ವಿಷಯಗಳಿಗೆ ಸಂಬಂಧಿಸಿ ಪರಿಶೀಲನೆ ಮತ್ತು ವಿಚಾರಣೆಯನ್ನು ಕೈಗೆತ್ತಿಕೊಳ್ಳುವ ಅಧಿಕಾರವನ್ನು ಸಮಿತಿ ಹೊಂದಿದೆ.

ಸಮಿತಿಯು ಪರಿಶೀಲನೆಗೆ ಮತ್ತು ವಿಚಾರಣೆಗೆ ಕೈಗೆತ್ತಿ ಕೊಳ್ಳುವ ವಿಷಯಗಳಿಗೆ ಸಂಬಂಧಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸಂಬಂಧಿಸಿದ ಸಚಿವಾಲಯಗಳಿಗೆ, ಇಲಾಖೆಗಳಿಗೆ, ಸಾರ್ವಜನಿಕ ವಲಯಗಳಲ್ಲಿನ ಕಂಪನಿ–ಮಂಡಳಿ–ನಿಗಮಗಳಿಗೆ, ರಾಷ್ಟ್ರೀಕೃತ ಬ್ಯಾಂಕುಗಳಿಗೆ, ಸ್ವಾಯತ್ತ ಸಂಸ್ಥೆಗಳಿಗೆ ಮತ್ತು ಸರ್ಕಾರದಿಂದ ಅನುದಾನ/ಪ್ರಯೋಜನ ಪಡೆದುಕೊಳ್ಳುತ್ತಿರುವ ಯಾವುದೇ ಸಂಸ್ಥೆಗೆ ನಿರ್ದೇಶನ ನೀಡುವ ಅಧಿಕಾರವನ್ನು ಹೊಂದಿದೆ.

ಪರಿಶೀಲನೆಗೆ ಮತ್ತು ವಿಚಾರಣೆಗೆ ಕೈಗೆತ್ತಿ ಕೊಳ್ಳುವ ವಿಷಯಗಳ ಬಗ್ಗೆ ಹೆಚ್ಚಿನ ತನಿಖೆ/ಅಧ್ಯಯನ ಮಾಡುವ ದೃಷ್ಟಿಯಿಂದ ಕಾಲಕಾಲಕ್ಕೆ ಉಪಸಮಿತಿ/ಅಧ್ಯಯನ ತಂಡಗಳನ್ನು ರಚಿಸುವ ಅಧಿಕಾರವನ್ನು ಸಮಿತಿ ಹೊಂದಿದೆ.

ತನ್ನ ಪರಿಶೀಲನಾ ಮತ್ತು ವಿಚಾರಣಾ ಪ್ರಕ್ರಿಯೆಯಲ್ಲಿ ಯಾವುದೇ ವಿಷಯದ ಬಗ್ಗೆ 'ಸ್ಥಳದಲ್ಲೇ ಅಧ್ಯಯನವು ಅಗತ್ಯ' ಎಂದು ಸಮಿತಿ ಭಾವಿಸಿದಲ್ಲಿ, ಸಮಿತಿಯು ತನ್ನ ಸದಸ್ಯರದೇ ತಂಡವನ್ನು ರಚಿಸಿ, ಅವರನ್ನು ಅಧ್ಯಯನಕ್ಕಾಗಿ ವಿವಿಧ ಸ್ಥಳಗಳಿಗೆ ಕಳಿಸಿಕೊಡುವ ಮತ್ತು ಅಧ್ಯಯನ ಕುರಿತ ವರದಿಯನ್ನು ಶಿಫಾರಸುಗಳೊಂದಿಗೆ ನೀಡುವಂತೆ ಸೂಚಿಸುವ ಅಧಿಕಾರವನ್ನು ಹೊಂದಿದೆ.

ಸಮಿತಿ ಅಥವಾ ಅಧ್ಯಯನ ತಂಡವು ಪ್ರವಾಸದಲ್ಲಿ ಇರುವಾಗ ಸಾಂದರ್ಭಿಕ ಚರ್ಚೆಗೆ, ಸಾಕ್ಷ್ಯ ಸಂಗ್ರಹಕ್ಕೆ ಅವಕಾಶ ಇದೆಯೇ ಹೊರತು, ಯಾವುದೇ ತೀರ್ಮಾನಗಳನ್ನು ಕೈಗೊಳ್ಳ ತಕ್ಕದ್ದಲ್ಲ. ಅಧ್ಯಯನ ಪ್ರವಾಸದಲ್ಲಿ ನಡೆಸುವ ಚರ್ಚೆ, ಅಲ್ಲಿ ದೊರಕುವ ದಾಖಲೆ ಮತ್ತು ಸಾಕ್ಷ್ಯಗಳನ್ನು ಸಮಿತಿಯ ಕಚೇರಿಗೆ ತಂದು, ಕೂಲಂಕಷ ವಿಚಾರಣೆಯ ಪ್ರಕ್ರಿಯೆಯನ್ನು ನಡೆಸ ತಕ್ಕದ್ದು; ನಂತರವೇ, ಆ ವಿಷಯ ಕುರಿತು ಅಧಿಕೃತ ತೀರ್ಮಾನ ಪ್ರಕಟಿಸತಕ್ಕದ್ದು. ಸಮಿತಿಯು ವಿಚಾರಣೆಯನ್ನು ಸಂಸತ್ ಭವನದಲ್ಲಿ, ಸಂಸತ್ ಭವನದ ಅನೆಕ್ಸ್ ಕಟ್ಟಡದಲ್ಲಿ ಅಥವಾ ಸಂಸತ್ ಗ್ರಂಥಾಲಯ ಕಟ್ಟಡದಲ್ಲಿ ನಡೆಸತಕ್ಕದ್ದು.

**ವಿಚಾರಣೆ ನಡೆಸುವ ರೀತಿ**

ಅಧಿಕಾರಿ ಅಥವಾ ಅಧಿಕಾರೇತರ ಸದಸ್ಯರನ್ನು ವಿಚಾರಣೆ ನಡೆಸುವ ರೀತಿಯು, ಸಮಿತಿಯು ನಿರ್ಧರಿಸಿರುವಂತೆ, ಹೀಗಿರುತ್ತದೆ:

1. ಸಮಿತಿಯು ನಿಗದಿಪಡಿಸುವ ದಿನಾಂಕ ಮತ್ತು ಸಮಯಕ್ಕೆ ಅಧಿಕಾರಿ ಮತ್ತು ಅಧಿಕಾರೇತರ ಸದಸ್ಯರು ಹಾಜರಾಗಬೇಕು; ಮೊದಲು ಅಧಿಕಾರೇತರ ಸದಸ್ಯರು, ನಂತರ ಅಧಿಕಾರಿ ಸದಸ್ಯರು ಸಾಕ್ಷ್ಯ ನುಡಿಯಬೇಕು.

2. ಅಧಿಕಾರಿ ಮತ್ತು ಅಧಿಕಾರೇತರ ಸದಸ್ಯರು (ಎ) ಸಂಸ್ಥೆಯ ಕಾರ್ಯರೀತಿ (ಬಿ) ಸಮಿತಿಯು ಬಯಸುವ ವಿಷಯಗಳ ಮೇಲಿನ ಮಾಹಿತಿ ಕುರಿತು ಸಾಕ್ಷ್ಯ ನುಡಿಯ ಬೇಕು. ಸಚಿವಾಲಯ, ಇಲಾಖೆ, ಸಾರ್ವಜನಿಕ ವಲಯಗಳಲ್ಲಿನ ಕಂಪನಿ, ಮಂಡಳಿ, ನಿಗಮಗಳು, ರಾಷ್ಟ್ರೀಕೃತ ಬ್ಯಾಂಕುಗಳು, ಸ್ವಾಯತ್ತ ಸಂಸ್ಥೆಗಳು ಮತ್ತು ಸರ್ಕಾರದಿಂದ ಅನುದಾನ/ಪ್ರಯೋಜನ ಪಡೆದುಕೊಳ್ಳುತ್ತಿರುವ ಯಾವುದೇ ಸಂಸ್ಥೆಗಳಿಗೆ ಸೇರಿದ ಸಿಬ್ಬಂದಿ ವರ್ಗದ ಬಗ್ಗೆ ಮಾಹಿತಿ ಪಡೆಯತಕ್ಕದ್ದು;

ಆದರೆ, ಸಮಿತಿ ಅಥವಾ ಸಮಿತಿ ಸದಸ್ಯರು ಯಾವೊಬ್ಬ ನಿರ್ದಿಷ್ಟ ಸಿಬ್ಬಂದಿಯ ಬಗ್ಗೆ ಪ್ರಶ್ನೆಗಳನ್ನು ಹಾಕುವಂತಿಲ್ಲ.

3. ಸಮನ್ಸ್ ಮೇರೆಗೆ ಸಮಿತಿಯ ಮುಂದೆ ಬರುವ ಸಚಿವಾಲಯ, ಇಲಾಖೆ, ಸಾರ್ವಜನಿಕ ವಲಯಗಳಲ್ಲಿನ ಕಂಪನಿ, ಮಂಡಳಿ, ನಿಗಮಗಳಿಗೆ, ರಾಷ್ಟ್ರೀಕೃತ ಬ್ಯಾಂಕುಗಳ ಸ್ವಾಯತ್ತ ಸಂಸ್ಥೆಗಳ ಮತ್ತು ಸರ್ಕಾರದಿಂದ ಅನುದಾನ/ಪ್ರಯೋಜನ ಪಡೆದುಕೊಳ್ಳುತ್ತಿರುವ ಯಾವುದೇ ಸಂಸ್ಥೆಯ ಅಧಿಕಾರಿಗಳಿಂದ ಸಾಕ್ಷ್ಯ/ಹೇಳಿಕೆ ಪಡೆಯುವ ಸಂದರ್ಭದಲ್ಲಿ ಸಚಿವಾಲಯದ ಕಾರ್ಯದರ್ಶಿಯು ಪ್ರಧಾನ ವಕ್ತಾರರಾಗಿರುತ್ತಾರೆ. ಅವರು ಮೊದಲು, ಎಲ್ಲರ ಪರಿಚಯ ಪಡೆದುಕೊಂಡು, ಅದನ್ನು ಸಮಿತಿಗೆ ಮತ್ತು ಸಮಿತಿ ಸದಸ್ಯರಿಗೆ ಒದಗಿಸುತ್ತಾರೆ. ನಂತರ, ಸಾಕ್ಷ್ಯ/ಹೇಳಿಕೆ/ವಿಚಾರಣೆ ನಡೆಯುವ ಪ್ರಕ್ರಿಯೆಯಲ್ಲಿ ಸಹಕಾರಿಯಾಗಿರುತ್ತಾರೆ.

4. ನಂತರ, ಸಮಿತಿ ಅಧ್ಯಕ್ಷರು ಅಥವಾ ಸಂಚಾಲಕರು ಪ್ರಶ್ನೆಗಳನ್ನು ಕೇಳುತ್ತಾರೆ.

5. ಅನಂತರ, ಉಪಪ್ರಶ್ನೆಗಳನ್ನು ಅಥವಾ ಹೆಚ್ಚಿನ ವಿವರಣೆ ಪಡೆದುಕೊಳ್ಳಲು ಪೂರಕ ವಾಗುವ ಪ್ರಶ್ನೆಗಳನ್ನು ಸಮಿತಿ ಸದಸ್ಯರು ಕೇಳುತ್ತಾರೆ.

**ದೂರುಗಳ/ಮನವಿಗಳಿಗೆ ಪರಿಹಾರ**

ದೂರು/ಮನವಿಗಳನ್ನು ಈ ಮುಂದಿನ ರೀತಿಯಲ್ಲಿ ಪರಿಶೀಲಿಸಬೇಕೆಂದು ಸಮಿತಿ ನಿರ್ಧರಿಸಿದೆ:

(i) ಲೋಕಸಭಾ ಅಧ್ಯಕ್ಷರು ನಿರ್ದೇಶನ ನೀಡಿರುವಂತೆ, ಸರ್ಕಾರಿ ಅಧಿಕಾರಿ/ನೌಕರರು ತಮ್ಮ ಸೇವೆಗೆ ಸಂಬಂಧಿಸಿದಂತೆ ಸಲ್ಲಿಸುವ ದೂರು/ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಸಂಕಷ್ಟಕ್ಕೆ ಅಥವಾ ಅನ್ಯಾಯಕ್ಕೆ ಒಳಗಾಗಿರುವುದಾಗಿ ಭಾವಿಸುವ ಅಧಿಕಾರಿ/ನೌಕರರು ಇಲಾಖಾ ನಿಯಮದಂತೆ ತಮ್ಮ ಉನ್ನತ ಅಧಿಕಾರಿಗಳಿಗೆ ಇಂಥ ದೂರು/ಮನವಿಗಳನ್ನು ಸಲ್ಲಿಸುವ ಅವಕಾಶವನ್ನು ಬಳಸಿಕೊಳ್ಳತಕ್ಕದ್ದು.

ಇಂಥ ದೂರು/ಮನವಿಗಳು ಸಮಿತಿ ಕಚೇರಿಯಲ್ಲಿ ಸ್ವೀಕೃತವಾದರೆ, ಮುಂದಿನ ಅಗತ್ಯ ಕ್ರಮಕ್ಕಾಗಿ ಅವುಗಳನ್ನು ಸಂಬಂಧಿಸಿದ ಸಚಿವಾಲಯಕ್ಕೆ/ಇಲಾಖೆಗೆ/ಸಂಸ್ಥೆಗೆ/ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ರವಾನಿಸಲಾಗುವುದು. ಆ ಕುರಿತು ಕೈಗೊಂಡ ಕ್ರಮವನ್ನು ಸಂಬಂಧಿಸಿದ ಅಧಿಕಾರಿ/ನೌಕರರಿಗೆ ತಿಳಿಸುವಂತೆ ಸೂಚಿಸಲಾಗುವುದು.

(ii) ಪ.ಜಾತಿ/ಪ.ಪಂಗಡಗಳವರ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಯಿಂದ ಸಲ್ಲಿಸಲಾಗುವ ಮನವಿಗಳನ್ನು ಸಮಿತಿಯು ಪರಿಶೀಲಿಸಿ, ಆ ಕುರಿತು ಅಗತ್ಯ ಶಿಫಾರಸನ್ನು ಸಂಬಂಧಿಸಿದ ಇಲಾಖೆಗೆ/ರಾಜ್ಯ ಸರ್ಕಾರಕ್ಕೆ ಮಾಡುತ್ತದೆ.

(iii) ಹೆಸರು, ವಿಳಾಸ ಇಲ್ಲದ, ಕೋಪಾವೇಶದಲ್ಲಿ ಬರೆದು ಸಲ್ಲಿಸಿದ ಮತ್ತು ಅವಿಧೇಯ ರೀತಿಯಲ್ಲಿ ಬರೆದು ಸಲ್ಲಿಸಿದ ದೂರು/ಮನವಿಗಳನ್ನು ಸಮಿತಿ ಸಚಿವಾಲಯದಲ್ಲಿ ಫೈಲ್ ಮಾಡಲಾಗುವುದು.

**ಸಮಿತಿಯ ವರದಿಗಳು**

ಸಮಿತಿಯು ಗ್ರಹಿಸುವ ಅಂಶಗಳನ್ನು ಮತ್ತು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ವರದಿಗಳನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಕಾಲಕಾಲಕ್ಕೆ ಮಂಡಿಸಲಾಗುವುದು.

**ಸಾಧನೆಗಳು**

1968ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಸಮಿತಿಯು, ಇದುವರೆಗೆ 216 ವರದಿಗಳನ್ನು ಮತ್ತು 203 ಕ್ರಮಕೈಗೊಂಡ ಬಗೆಗಿನ ವರದಿಗಳನ್ನು ಸಲ್ಲಿಸಿದೆ.

ಅಲ್ಲದೆ, ಸಮಿತಿಯ ವಿವಿಧ ಅಧ್ಯಯನ ಗುಂಪುಗಳು ಕೈಗೊಂಡ ಅಧ್ಯಯನ ಪ್ರವಾಸಗಳ ಬಳಿಕ 170 ವರದಿಗಳನ್ನು ಸಲ್ಲಿಸಿದೆ. ಇವುಗಳನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಲಾಗಿದೆ.


**ಪ್ರಕಟಣೆ**

ಲೋಕಸಭಾ ಸಚಿವಾಲಯ

ನವದೆಹಲಿ, ಮೇ 2014

**'ಕರ್ನಾಟಕ ಸಮಾಜವಾದಿ ಫೋರಮ್' ಪರವಾಗಿ**

**ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದ: ಮಂಗ್ಳೂರ ವಿಜಯ**

ಮೊಬೈಲ್: 94491–02294